## ಪಾಠ–1 ಮಾರ್ಚ್ 31–ಏಪ್ರಿಲ್ 6

# ಮಹಾ ಹೋರಾಟ

**ಸಬ್ಬತ್ತಿನ ಮಧ್ಯಾನ್ಹ :**

**ಈ ವಾರದ ಅಧ್ಯಯನಕ್ಕಾಗಿ :** ಯೆಹೆಜ್ಕೆಲನು 28:1,2, 11–17; ಆದಿಕಾಂಡ 3:1–7; ಪ್ರಕಟಣೆ 12:1–17; ರೋಮ 8:31–39; ಪ್ರಕಟಣೆ 14:12.

**ಸ್ಮರಣ ವಾಕ್ಯ : ಆಗ ಘಟಸರ್ಪನು ಸ್ತ್ರೀಯ ಮೇಲೆ ಕೋಪಿಸಿಕೊಂಡು ಆಕೆಯ ಸಂತಾನದವರಲ್ಲಿ ಉಳಿದವರ ಮೇಲೆ ಅಂದರೆ ದೇವರ ಆಜ್ಞೆಗಳನ್ನು ಕೈಕೊಂಡು ನಡೆದು ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳುವವರ ಮೇಲೆ ಯುದ್ಧ ಮಾಡುವದಕ್ಕೆ ಹೊರತು ಸಮುದ್ರ ತೀರದ ಮರಳಿನ ಮೇಲೆ ನಿಂತನು. (ಪ್ರಕಟಣೆ 12:17).**

ಜಗತ್ತಿನ ಹೋರಾಟ ಕೆಲವು ಸಮಯಗಳಲ್ಲಿ ಮಹಾ ಹೋರಾಟ ಎಂದು ಸತ್ಯವೇದದ ದೃಷ್ಟಿಕೋನದಲ್ಲಿ ಕರೆಯಲಾಗುತ್ತದೆ. ಇದು ಪ್ರಪಂಚದ ನಾಟಕದ ಹಿನ್ನಲೆಯಾಗಿದೆ, ಮತ್ತು ಇಡೀ ವಿಶ್ವದ ಹಿನ್ನಲೆಯಾಗಿದೆ. ಇದು ಪಾಪ, ಹಿಂಸೆ, ಮರಣ, ದೇಶಗಳ ಏಳುವಿಕೆ ಮತ್ತು ಬೀಳುವಿಕೆ, ಸುವಾರ್ತೆಯ ಸಾರುವಿಕೆ, ಕೊನೆಯ ದಿನಗಳ ಘಟನೆಗಳು ಇವೆಲ್ಲವೂ ಕೂಡ ಈ ಮಹಾಹೋರಾಟದ ಹಿನ್ನಲೆಯಲ್ಲಿ ನಡೆಯುತ್ತವೆ.

ಈ ವಾರ ನಾವು ಈ ಮಹಾ ಹೋರಾಟವು ಎಲ್ಲಿ ಆರಂಭವಾಯಿತು, ಇದರ ಉಗಮ ಬಹಳ ಸೂಕ್ಷ್ಮವಾದದ್ದು, ಮತ್ತು ರಹಸ್ಯವಾದದ್ದು, ಯಾಕೆಂದರೆ ಪರಿಪೂರ್ಣನಾದ ಲೂಸಿಫರನ ಹೃದಯದಲ್ಲಿ ದೇವರ ವಿರುದ್ದವಾಗಿ ದಂಗೆ ಏಳಬೇಕು ಎಂಬ ಆಲೋಚನೆ ಮತ್ತು ಇತರರ ಜೊತೆಯಲ್ಲಿ ಭೂಮಿಗೆ ಬೀಳುವುದು. ಅದಾಮ ಮತ್ತು ಹವ್ವಳು ಇವು ಇದರಲ್ಲಿ ಭಾಗಿಯಾಗುವುದು. ಈ ಎರಡು ಪ್ರಧಾನ ವಿಷಯಗಳಾದ ಲೂಸಿಫರ ಬೀಳುವಿಕೆ ಮತ್ತು ಅದಾಮ

ಹಾಗು ಹವ್ವಳ ಬೀಳುವಿಕೆಯಿಂದ ಮಹಾ ಹೋರಾಟವು ಆರಂಭವನ್ನು ಪಡೆದುಕೊಂಡಿತು ಮತ್ತು ಅದು ಇಂದಿಗೂ ಕೂಡ ನಡೆಯುತ್ತಲೇ ಇದೆ. ಈ ಮಹಾ ಹೋರಾಟದ ನಾಟಕದಲ್ಲಿ ನಾವೆಲ್ಲರೂ ಕೂಡ ಒಂದು ಪಾತ್ರವನ್ನು ಪೋಷಿಸುತ್ತಿದ್ದೇವೆ.

ಸಂತೋಷದ ಸುದ್ದಿಯೆಂದರೆ ಒಂದು ದಿನ ಇದು ಅಂತ್ಯವಾಗುವುದಲ್ಲದೆ, ಇದು ಸೈತಾನನ ಮೇಲೆ ಕ್ರಿಸ್ತನಿಗೆ ಸಂಪೂರ್ಣವಾದ ಜಯವನ್ನು ತಂದುಕೊಡುತ್ತದೆ. ಇದಕ್ಕಿಂತ ಹೆಚ್ಚಿನ ಸಂತೋಷವೆಂದರೆ ಇದು ಯೇಸುವು ಶಿಲುಬೆಯ ಮೇಲೆ ಮಾಡಿದ ಕಾರ್ಯವನ್ನು ಸಂಪೂರ್ಣಗೊಳಿಸುತ್ತದೆ, ಆ ಜಯವನ್ನು ನಾವೆಲ್ಲರೂ ಕೂಡ ಅನುಭವಿಸಬಹುದು. ದೇವರು ಈಗ ನಮ್ಮನ್ನು ನಂಬಿಕೆ ಮತ್ತು ವಿಧೇಯತೆ ಕರೆಯುತ್ತಾನೆ. ನಾವು ಯೇಸುವಿನಲ್ಲಿ ಕಾಯುವ ಹಾಗೆ ಆತನ ಬರೋಣವು ನಮಗೆ ವಾಗ್ದಾನವಾಗಿ ನೀಡಲಾಗಿದೆ.

**ಈ ವಾರದ ಪಾಠವನ್ನು ಏಪ್ರಿಲ್ 7 ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ,**

**ಭಾನುವಾರ**

## ಪರಿಪೂರ್ಣನಾದ ವ್ಯಕ್ತಿಯ ಬೀಳುವಿಕೆ

ಮಹಾ ಹೋರಾಟವು ಸತ್ಯವೇದ ದೃಷ್ಟಿಕೋನದ ಹಿನ್ನಲೆಯಾದರೆ ಇದು ಅನೇಕ ಪ್ರಶ್ನೆಗಳ ಕಡೆಗೆ ನಮ್ಮನ್ನು ನಡೆಸುತ್ತದೆ. ಅದರಲ್ಲಿ ಮುಖ್ಯವಾದದ್ದು, ಇದೆಲ್ಲವೂ ಹೇಗೆ ಆರಂಭವಾಯಿತು. ಯಾಕೆಂದರೆ ಪ್ರೀತಿಸ್ವರೂಪನಾದ ದೇವರು ವಿಶ್ವವನ್ನು ಸೃಷ್ಟಿಸಿದ್ದಾನೆ, ಸೃಷ್ಟಿ ಆರಂಭದಿಂದಲೂ ಕೂಡ ಸೃಷ್ಟಿಯಲ್ಲಿ ದುಷ್ಟತನ, ಹಿಂಸೆ, ಮತ್ತು ಹೋರಾಟಗಳು ಇದ್ದರೆ ಇದನ್ನು ಊಹಿಸಿಕೊಳ್ಳುವುದು ಬಹಳ ಸುಲಭ. ಆಗ ಹೋರಾಟವು ಎಲ್ಲಿಂದ ಆರಂಭವಾಗಿದೆ ಎಂದು ನಾವು ವಾದಿಸಬಹುದು ಮತ್ತು ಇದು ಅದರ ಪ್ರತಿಫಲವೆಂದು ಹೇಳಬಹುದು, ಹೋರಾಟವು ಇಲ್ಲಿದೆ, ಇದು ನಿಜವಾಗಿದೆ, ಮತ್ತು ಅದರಲ್ಲಿ ನಾವೆಲ್ಲರೂ ಕೂಡ ಭಾಗಿಯಾಗಿದ್ದೇವೆ.

ಯೆಹೆಜ್ಕೆಲನು 28:1,2, 11–17 ಮತ್ತು ಯೆಶಾಯ 14:12–14 ನ್ನು ಓದಿರಿ. ಲೂಸಿಫರ ಬೀಳುವಿಕೆ ಮತ್ತು ಪಾಪದ ಆರಂಭದ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ?

ಲೂಸಿಫರನು ಪರಿಪೂರ್ಣನಾದ ವ್ಯಕ್ತಿಯಾಗಿ ಪರಲೋಕದಲ್ಲಿದ್ದನು. ಅವನಲ್ಲಿ ಪಾಪವು ಹೇಗೆ ಬರುತ್ತದೆ, ಅದರಲ್ಲೂ ಅಂತಹ ವಾತವರಣದಲ್ಲಿ? ನಮಗೆ ಅದು ಗೊತ್ತಿಲ್ಲ. ಈ ಒಂದು ಕಾರಣಕ್ಕಾಗಿಯೇ ಸತ್ಯವೇದವು ಇದನ್ನು ಅಧರ್ಮವು ಈಗಲೂ ಗುಪ್ತವಾಗಿದೆ (2 ಥೆಸಲೋನಿಕ 2:7).

ದೇವರು ತನ್ನ ಎಲ್ಲಾ ಸೃಷ್ಟಿಯ ಬುದ್ದಿಜೀವಿಗಳಿಗೆ ನೀಡಿರುವ ಮುಕ್ತ ಮನಸ್ಸಿನ ಆಯ್ಕೆಯ ಸ್ವಾತಂತ್ರ್ಯದ ವಾಸ್ತವಿಕತೆಯ ಹೊರಗೆ ಲೂಸಿಫರನ ಬಿಳುವಿಕೆಗೆ ಯಾವುದೇ ಕಾರಣ ಇಲ್ಲ. ಎಲೆನ್ ಜಿ ವೈಟ್ ರವರುಅದ್ಭುತವಾಗಿ ಹೇಳುವ ಹಾಗೆ ಪಾಪದ ಆರಂಭಕ್ಕೆ ಹೇಗೆ ಕಾರಣ ನೀಡಲು ಸಾಧ್ಯವಿಲ್ಲವೋ ಹಾಗೆಯೇ ಅದರ ಅಸ್ತಿತ್ವಕ್ಕೂ ಕೂಡ ಕಾರಣ ನೀಡಲು ಸಾಧ್ಯವಿಲ್ಲ....ಪಾಪವು ಯಾವಾಗಲೂ ಕೂಡ ಒಂದು ಅನಾಹುತ, ಅದರ ಅಸ್ತಿತ್ವಕ್ಕೆ ಕಾರಣ ನೀಡಲು ಸಾಧ್ಯವಿಲ್ಲ. ಇದೊಂದು ರಹಸ್ಯ, ಲೆಕ್ಕ ಹಾಕಲು ಸಾದ್ಯವಿಲ್ಲ, ಯಾವುದೇ ಕಾರಣ ನೀಡಲು ಸಾಧ್ಯವಿಲ್ಲ. ಅದಕ್ಕೆ ಸರಿಯಾದ ಕಾರಣವನ್ನು ಹುಡುಕಿದರೆ, ಅದರ ಅಸ್ತಿತ್ವಕ್ಕೆ ಕಾರಣವನ್ನು ತೋರಿಸಿದರೆ ಅದು ಪಾಪವಾಗಿ ಉಳಿಯುವುದಿಲ್ಲ. **ಮಹಾ ಹೋರಾಟ ಪುಟ 492, 493**.

ಪಾಪ ಎಂಬ ಪದವನ್ನು ದುಷ್ಟ ಎಂಬ ಪದದ ಬದಲಿಗೆ ಉಪಯೋಗಿಸಿದಾಗ ಇದರ ಅರ್ಥವು ನಮಗೆ ಸಿಗುತ್ತದೆ. ದುಷ್ಟತನ ಆರಂಭವನ್ನು ನಾವು ವಿವರಿಸಿದರೆ ಅದರ ಉಳಿವಿಗೆ ನಾವು ಕಾರಣವನ್ನು ಕೊಡಬಹುದು....ದುಷ್ಟತನ ಒಂದು ಅನಾಹುತ ಅದರ ಉಳಿವಿಗೆ ಕಾರಣ ಕೊಡಲು ಸಾಧ್ಯವಿಲ್ಲ. ಅದೊಂದು

ರಹಸ್ಯ, ವಿವರಣೆ ನೀಡಲು ಆಗದ, ಸಮರ್ಥನೆ ಮಾಡಿಕೊಳ್ಳಲು ಆಗದ ವಿಷಯ. ಅದನ್ನು ನಾವು ಸರಿಯಾಗಿ ವಿವರಿಸಿದರೆ ಮತ್ತು ಅದಕ್ಕೆ ವಿವರಣೆಯನ್ನು ನೀಡಿದರೆ ಅದು ದುಷ್ಟತನವಾಗಲೂ ಸಾಧ್ಯವಿಲ್ಲ.

**ಆಯ್ಕೆಯ ಸ್ವಾತಂತ್ರ್ಯದ ಕುರಿತಾಗಿ ನಿಮ್ಮ ವ್ಯಯಕ್ತಿಕ ಜೀವನದಲ್ಲಿ ನಡೆದ ಅನುಭವಗಳನ್ನು ಕುರಿತಾಗಿ ಆಲೋಚಿರಿ. ಯಾಕೆ, ಆಯ್ಕೆಯ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಂಡು ನಾವು ಮಾಡುವ ಆಯ್ಕೆಗಳ ವಿಚಾರದಲ್ಲಿ ನಾವು ಎಷ್ಟು ಎಚ್ಚರಿಕೆಯನ್ನು ವಹಿಸಬೇಕು?**

**ಸೋಮವಾರ**

## ಸಾಮನ್ಯ ಜ್ಞಾನಕ್ಕಿಂತ ಮಿಗಿಲಾದದ್ದು

ನಾವು ಪಾಪವು ಹೇಗೆ ಆರಂಭವಾಯಿತು ಎನ್ನುವುದಕ್ಕೆ ವಿವರಣೆಯನ್ನು ನೀಡಲು ಸಾಧ್ಯವಿಲ್ಲದೆ ಹೋದರು ಕೂಡ (ಯಾಕೆಂದರೆ ಅದಕ್ಕೆ ವಿವರಣೆಯು ಇಲ್ಲ) ಸತ್ಯವೇದವು ಅದು ಲೂಸಿಫರನ ಹೃದಯದಲ್ಲಿ ಪರಲೋಕದಲ್ಲಿ ಆರಂಭವಾಯಿತು ಎಂದು ಹೇಳುತ್ತದೆ. ಎಲೆನ್ ಜಿ ವೈಟ್ ರವರ ಬರವಣಿಗೆಯಲ್ಲಿ ನಾವು ನೋಡುವ ಅಚ್ಚರಿಯ ವಿಷಯಗಳನ್ನು ಹೊರತುಪಡಿಸಿ (ಉದಾಹರಣೆಗೆ ಮಹಾ ಹೋರಾಟದ ಪಾಪದ ಆರಂಭ ಎಂಬ ಅಧ್ಯಾಯ) ಸತ್ಯವೇದವು ಇದು ಹೇಗೆ ಆರಂಭವಾಯಿತು ಎಂದು ಹೇಳುವುದಿಲ್ಲ. ದೇವರ ವಾಕ್ಯವು ಬಹಳ ಸ್ಪಷ್ಟವಾಗಿದೆ, ಅದರೂ ಕೂಡ ಇದು ಹೇಗೆ ಆರಂಭವಾಯಿತು ಎಂದು ಅದು ಹೇಳುವುದಿಲ್ಲ.

ಆದಿಕಾಂಡ 3:1–7 ನ್ನು ಓದಿರಿ. ಇಲ್ಲಿ ನಡೆದ ವಿಷಯವು ಅದಾಮ ಮತ್ತು ಹವ್ವಳ ದೋಷಪೂರಿತವಾದ ಕ್ರಿಯೆಯು ಹೇಗೆ ಎಲ್ಲರಿಗೂ ವರ್ಗಾವಣೆಗೊಂಡಿದೆ?

---

---

ದೇವರು ಅವರಿಗೆ ಏನು ಹೇಳಿದನು ಎಂಬುದು ಹವ್ವಳಿಗೆ ಚೆನ್ನಾಗಿ ಗೊತ್ತಿತ್ತು. ಅವುಗಳನ್ನು ಆಕೆಯು ಮತ್ತೆ ಹೇಳಿದಳು. ದೇವರು ಹೇಳಿದ್ದಾನೆ , ನೀವು ಅದನ್ನು ತಿನ್ನಬಾರದು, ಮತ್ತು ಅದನ್ನು ನೀವು ಮುಟ್ಟಲೂ ಬಾರದು ತಿಂದರೆ ನೀವು ಸಾಯುವಿರಿ ಸತ್ಯವೇದದ ಪ್ರಕಾರ ಮರವನ್ನು ಮುಟ್ಟುವುದರ ಕುರಿತಾಗಿ ಏನೂ ಹೇಳುವುದಿಲ್ಲ. ಆದರೂ ಕೂಡ ಅದನ್ನು ತಿನ್ನುವುದರಿಂದ ಸಾಯುತ್ತೇವೆ ಎಂಬುದು ಆಕೆಗೆ ಚೆನ್ನಾಗಿ ಗೊತ್ತಿತ್ತು.

ಸೈತಾನನು, ಮತ್ತೆ ಈ ಮಾತುಗಳನ್ನು ಬಹಿರಂಗವಾಗಿ ವಿಬೇಧಿಸುತ್ತಾನೆ. ಆಗ ಸರ್ಪವು ಸ್ತ್ರೀಗೆ ನೀವು ಹೇಗೂ ಸಾಯುವುದಿಲ್ಲ (ಆದಿಕಾಂಡ 3:4).

ಇದು ಯಾವ ರೀತಿಯ ವೈರುದ್ಯತೆಯನ್ನು ತೋರಿಸುತ್ತದೆ? ಮೊದಲ ಬಾರಿಗೆ ಆಕೆಯನ್ನು ಸೈತಾನನು ಸಂಧಿಸುವಾಗ ಅವನು ಎಷ್ಟು ಆಳವಾಗಿರಬಹುದು, ಒಮ್ಮೆ ಆಕೆಯ ಗಮನವನ್ನು ಸೆಳೆದ ನಂತರ ಆಕೆಯು ಅದನ್ನು ವಿರೋಧಿಸಲು ಸಾಧ್ಯವಾಗದಂತೆ ನೋಡಿಕೊಂಡನು, ಅವನು ಮುಕ್ತವಾಗಿ ದೇವರ ಆಜ್ಞೆಯನ್ನು ಪ್ರಶ್ನಿಸಿದನು. ದುರಂತವೆಂದರೆ ಆಕೆಯು ಆಜ್ಞಾನದ ತುದಿಯಲ್ಲಿ ನಿಂತಿರಲಿಲ್ಲ. ಆಕೆಯು ನನಗೆ ಗೊತ್ತಿಲ್ಲ ನನಗೆ ಗೊತ್ತಿಲ್ಲ ಎಂದು ಹೇಳಬಹುದಾಗಿತ್ತು. ಆದರೆ ಆಕೆಗೆ ಗೊತ್ತಿತ್ತು.

ಈ ಜ್ಞಾನದ ಹೊರತಾಗಿಯೂ ಕೂಡ, ಆಕೆಯು ತಪ್ಪು ಮಾಡಿದಳು. ಪರಿಪೂರ್ಣವಾದ ಎದೇನ್ ತೋಟದ ವಾತವಾರಣದಲ್ಲಿ ಹವ್ವಳು ಪಾಪ ಮಾಡದಂತೆ ತಡೆಯಲು (ಅದಾಮನಿಗೂ ಇದರ ಅರಿವು ಇತ್ತು) ಜ್ಞಾನವು ಸಾಕಾಗಲಿಲ್ಲ, ಆದ್ದರಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಲು ಜ್ಞಾನವು ಸಾಕು ಎಂದು ತಿಳಿದುಕೊಳ್ಳಬಾರದು. ಹೌದು, ದೇವರ ವಾಕ್ಯವು ನಮಗೆ ಏನು ಹೇಳುತ್ತದೆ ಎಂದು ನಾವು ಅರ್ಥ ಮಾಡಿಕೊಳ್ಳಬೇಕು. ಆದರೆ ಅದನ್ನು ತಿಳಿದುಕೊಳ್ಳುವುದರ ಜೊತೆಗೆ ಅದನ್ನು ಕೇಳುವ ಮತ್ತು ಅದಕ್ಕೆ ತಲೆಬಾಗುವ ವಿಧೇಯತೆ ಬೇಕಾಗುತ್ತದೆ.

**ದೇವರು ಒಂದು ವಿಷಯವನ್ನು ಹೇಳಿದನು, ಸೈತಾನನು ಇನ್ನೊಂದು ಹೇಳಿದನು. ಆದಾಮ ಮತ್ತು ಹವ್ವಳು ಜ್ಞಾನವನ್ನು ಹೊಂದಿದ್ದರೂ ಕೂಡ ಅವರು ಸೈತಾನನ ಮಾತನ್ನು ಕೇಳಲು ಆಯ್ಕೆ ಮಾಡಿಕೊಂಡರು. ಶತಮಾನಗಳು ಕಳೆದರೂ ಕೂಡ ಇದು ಸ್ವಲ್ಪವೂ ಬದಲಾಗಿಲ್ಲ, ಇಂತಹ ತಪ್ಪನ್ನು ನಾವು ಮತ್ತೆ ಮಾಡದಂತೆ ಯಾವ ರೀತಿಯ ಎಚ್ಚರಿಕೆಯನ್ನು ವಹಿಸಬಹುದು?**

**ಮಂಗಳವಾರ**

## ಪರಲೋಕದಲ್ಲಿ ಮತ್ತು ಭೂಲೋಕದಲ್ಲಿ ಯುದ್ದ

ನಮ್ಮ ಮೊದಲ ತಂದೆತಾಯಿಯರ ಬೀಳುವಿಕೆ ಲೋಕವನ್ನು ಪಾಪಕ್ಕೆ ನೂಕಿತು, ಮತ್ತು ಮರಣಕ್ಕೆ ಒಳಗಾಗುವಂತೆ ಮಾಡಿತು. ಇದರ ತಕ್ಷಣದ ಕಾರಣಗಳ ಕುರಿತಾಗಿ ಜನರು ವಾದ ಮಾಡಬಹುದು, ಅಥವಾ ಯಾರ ತಪ್ಪು ಎಂದು ವಾದಿಸಬಹುದು ಆದರೆ, ಇದರ ಹಿಂಸೆ, ಕಷ್ಟ, ಕಣ್ಣೀರು, ಮತ್ತು ಹೋರಾಟದ ವಾಸ್ತವಿಕತೆಯನ್ನು ಯಾರು ತಾನೇ ಅಲ್ಲಗಳೆಯುವವರು ಯಾರು?

ನಾವು ವಿಶ್ವದೆಲ್ಲೆಡೆ ಇರುವ ಯುದ್ದದ ಕುರಿತಾಗಿ ಮಾತನಾಡುತ್ತಿದ್ದೇವೆ, ಮತ್ತು ಅದು ಒಳ್ಳೆಯದು, ಆದರೆ ಈ ಹೋರಾಟದ ಆರಂಭ ಹೇಗೆ ಇರಲಿ, ಅದು ಇಲ್ಲಿ ಈ ಲೋಕದಲ್ಲಿ ನಡೆಯುತ್ತಿದೆ, ಮತ್ತು ಇದು ಅನೇಕ ವಿಧಗಳಲ್ಲಿ ವಿಸ್ತರಿಸಿಕೊಂಡು ಕ್ರಿಸ್ತನ ಬರೋಣದ ತನಕ ನಡೆಯುತ್ತದೆ. ನಾವು ಈ ಹೋರಾಟದ ನಡುವೆ ಜೀವಿಸುತ್ತಿದ್ದೇವೆ. ದೇವರ ವಾಕ್ಯವು ಏನು ನಡೆಯುತ್ತಿದೆ ಎಂದು ವಿವರಿಸುತ್ತದೆ ಇದರ ಹಿಂದೆ ಏನಿದೆ, ಮತ್ತು ಅದಕ್ಕಿಂತ ಮುಖ್ಯವಾಗಿ ಇದು ಹೇಗೆ ಅಂತ್ಯವಾಗುತ್ತದೆ ಎಂದು ಹೇಳುತ್ತದೆ.

ಪ್ರಕಟನೆ 12:1–17. ಪರಲೋಕದಲ್ಲಿ ಮತ್ತು ಭೂಮಿಯಲ್ಲಿ ಯಾವ ರೀತಿಯಲ್ಲಿ ಈ ಯುದ್ದವು ಹರಡುತ್ತಿದೆ ಎಂದು ಈ ವಚನಗಳು ಹೇಳುತ್ತವೆ?

ಪರಲೋಕದಲ್ಲಿ ನಾವು ಯುದ್ದವನ್ನು ನೋಡಿದ್ದೇವೆ, ಮತ್ತು ಭೂಮಿಯಲ್ಲಿ ಕೂಡ ಯುದ್ದವನ್ನು ನೋಡಿದ್ದೇವೆ. ಮೊದಲ ಯುದ್ದವು ಘಟಸರ್ಪನು (ಸೈತಾನ ಪ್ರಕಟಣೆ 12:7–9) ಮತ್ತು ಮಿಕಾಯೇಲನ (ಇಬ್ರಿಯ ಭಾಷೆಯ ಅರ್ಥ ದೇವರ ಹಾಗೆ ಯಾರು?) ದಂಗೆಯೆದ್ದ ಲೂಸಿಫರನು ಸೈತಾನನು ಎಂದು ಹೆಸರು ಪಡೆದನು, ಅವನು ಸೃಷ್ಟಿಸಲ್ಪಟ್ಟ ವ್ಯಕ್ತಿಯಾಗಿದ್ದು ಸೃಷ್ಟಿಕರ್ತನ ವಿರುದ್ದವಾಗಿ ಅಂದರೆ ಯೇಸುವಿನ ವಿರುದ್ದ ನಿಂತನು (ಇಬ್ರಿಯರಿಗೆ 11,2; ಯೋಹಾನ 1:1–4).

ಲೂಸಿಫರನು ತನ್ನ ಸೃಷ್ಟಿಕರ್ತನ ವಿರುದ್ದವಾಗಿ ತಿರುಗಿಬಿದ್ದನು. ಮಹಾ ಹೋರಾಟವು ದೇವತೆಗಳ ಹೋರಾಟವಲ್ಲ, ಬದಲಿಗೆ ಅದು ಸೃಷ್ಟಿಸಲ್ಪಟ್ಟ ವ್ಯಕ್ತಿಯು ಸೃಷ್ಟಿಕರ್ತನ ವಿರುದ್ದವಾಗಿ ತಿರುಗಿ ಬೀಳುವುದು ಮತ್ತು ಆತನು ಸೃಷ್ಟಿಸಿದ ಸೃಷ್ಟಿಯನ್ನು ಕೂಡ ದಾಳಿ ಮಾಡಿ ನಾಶಪಡಿಸುವುದಾಗಿದೆ.

ಪರಲೋಕದಲ್ಲಿ ಕ್ರಿಸ್ತನ ವಿರುದ್ದದ ಯುದ್ದದಲ್ಲಿ ಸೋತ ನಂತರ, ಯೇಸುವು ಈ ಲೋಕದಲ್ಲಿ ಮಾನವನಾಗಿ ಹುಟ್ಟಿದ ನಂತರ ಆತನ ಹಿಂದೆ ಸೈತಾನನು ಬಿದ್ದನು. (ಪ್ರಕಟಣೆ 12:4). ಇಲ್ಲಿಯೂ ಕೂಡ ಆತನ ವಿರುದ್ದದ ಯುದ್ದದಲ್ಲಿ ಸೋತುಹೋಗಿ, ಸೈತಾನನು ಅರಣ್ಯದಲ್ಲಿ ಆತನ ವಿರುದ್ದ ಸೋತು ನಂತರ ಶಿಲುಬೆಯ ಮೇಲೆ ಸೋತು, ಹೀಗೆ ಸತತ ಸೋಲುಗಳ ನಂತರ ಸೈತಾನನು ಆತನ ಜನರ ವಿರುದ್ದ ಯುದ್ದ ಮಾಡಲು ಸಿದ್ದನಾದನು (ಪ್ರಕಟಣೆ 12:6, 14–16) ಮತ್ತು ಇದನ್ನು ಕೊನೆಯ ತನಕ ಮುಂದುವರೆಸಿಕೊಂಡು ಹೋಗುತ್ತಾನೆ (ಪ್ರಕಟಣೆ 12:17), ಸೈತಾನನು ಕ್ರಿಸ್ತನ ಎರಡನೇಯ ಬರೋಣದಲ್ಲಿ ಮತ್ತೊಂದು ಸೋಲನ್ನು ಕಾಣುತ್ತಾನೆ.

**ಪ್ರಕಟಣೆ 12:10–12 ನ್ನು ಓದಿರಿ. ಈ ಹಿಂದೆ ನಾವು ಕೆಲವು ವಚನಗಳಲ್ಲಿ ಮತ್ತು ಈ ವಚನಗಳಲ್ಲಿ ನಾವು ಯಾವ ರೀತಿಯ ನಿರೀಕ್ಷೆಯನ್ನು ನೋಡುತ್ತೇವೆ?**

ಬುಧವಾರ

# ನಿಮ್ಮ ಜೊತೆಯಲ್ಲಿ ಯಾವಾಗಲೂ, ಯುಗದ ಸಮಾಪ್ತಿಯವರೆಗೂ

ಸಭೆಯ ಚರಿತ್ರೆಯುದ್ದಕ್ಕೂ ಕೂಡ ದೇವರ ಜನರಿಗೆ ಹಿಂಸೆಯೂ ಯಾವಾಗಲೂ ಇರುತ್ತದೆ ಎಂದು ಪ್ರಕಟಣೆಯ ಪುಸ್ತಕವು ನಮಗೆ ಮುಂಚಿತವಾಗಿ ಹೇಳುತ್ತದೆ. ಪ್ರಕಟಣೆ 12:14 ರ 1260 ಪ್ರವಾದನೆಯ ದಿನಗಳು (ಪ್ರಕಟಣೆ 12:14) ದೇವರ ಮಕ್ಕಳ ವಿರುದ್ದ ನಡೆಯುವ ಹಿಂಸೆಯ 1260 ವರ್ಷಗಳ ಸಮಯವಾಗಿದೆ.

ಈ ಹಿಂಸೆಗಳು, ನಿರೋ ಚಕ್ರವರ್ತಿಯ ಕಾಲದಿಂದ ಪೌಲನ ಹತ್ಯೆಯ ಮೂಲಕ ಆರಂಭವಾಗಿ ಶತಮಾನಗಳ ತನಕ ಮುಂದುವರೆಯಿತು. ಕ್ರೈಸ್ತರು ಅತೀ ಘೋರವಾದ ಅಪರಾಧಗಳಿಗೆ ಭಾದ್ಯರನ್ನಾಗಿ ಮಾಡಿದರು ಮತ್ತು ಆ ಕಾಲದಲ್ಲಿ ನಡೆದ ನೈಸರ್ಗಿಕ ವಿಕೋಪಗಳಾದ ಭೂಕಂಪ, ಬರಗಾಲ, ಮತ್ತು ಸಾಂಕ್ರಾಮಿಕ ರೋಗಗಳಿಗೆ ಕಾರಣರನ್ನಾಗಿ ಮಾಡಲಾಯಿತು. ಹೀಗೆ ಅವರು ದ್ವೇಷದ ಪ್ರಮುಖ ಕಾರಣವಾದ ಹಾಗೆ ಅವರ ಕುರಿತಾಗಿ ಸಮಾಚಾರವನ್ನು ಕೊಡುವವರು ನಿರ್ದೋಷಿಗಳನ್ನು ಹಿಡಿದುಕೊಡಲು ಮತ್ತು ತಮ್ಮ ಸ್ವಂತ ಲಾಭಕ್ಕಾಗಿ ಕಾಯುತ್ತಿದ್ದರು. ಚಕ್ರವರ್ತಿಗಳ ವಿರುದ್ದ ನಿಂತವರ ಹಾಗೆ ಅವರನ್ನು ನೋಡಲಾಯಿತು, ಧಾರ್ಮಿಕತೆಯ ವಿರೋಧಿಗಳಾಗಿ ನೋಡಿದರು ಮತ್ತು ಸಮಾಜ ವಿರುದ್ದ ಎದ್ದು ಯುದ್ದ ಮಾಡುವ ಸಮಾಜಘಾತುಕರ ಹಾಗೆ ಅವರನ್ನು ಬಿಂಬಿಸಲಾಯಿತು. ಜನರು ನೋಡುವ ಕ್ರೀಡಾಂಗಣಗಳಲ್ಲಿ ಅವರಲ್ಲಿ ಅನೇಕರನ್ನು ಕ್ರೂರ ಮೃಗಗಳಿಗೆ ಆಹಾರವಾಗಿ ಹಾಕಲಾಯಿತು. **ಮಹಾ ಹೋರಾಟ ಪುಟ 88**.

ಅದೇ ಸಮಯದಲ್ಲಿ ಸ್ತ್ರೀಯು (ಸಭೆ) ಅರಣ್ಯಕ್ಕೆ ಓಡಿಹೋದಳು (ಪ್ರಕಟಣೆ 12:6). ಆಕೆಯನ್ನು ಹದ್ದಿಗೆ ಇರುವ ರೆಕ್ಕೆಗಳ ಹಾಗೆ ಎರಡು ಬಾರಿ ವರ್ಣಿಸಲಾಗಿದೆ. ಇದು ಸಹಾಯ ಎಲ್ಲಿ ಸಿಕ್ಕಿದರೂ ಅಲ್ಲಿಗೆ ಹಾರಿ ಹೋಗುವ ಸಹಾಯವನ್ನು ಅಕೆಗೆ ನೀಡಲಾಯಿತು. ಆಕೆಯನ್ನು ಆರಣ್ಯದಲ್ಲಿ ಕಾಪಾಡಲಾಯಿತು, ಮತ್ತು

ಸೈತಾನನು ಅಂದರೆ ಘಟಸರ್ಪನು ಅವಳ ಹತ್ತಿರ ಬರಲು ಸಾಧ್ಯವಾಗಲಿಲ್ಲ (ಪ್ರಕಟನೆ 12:14). ದೇವರು ಮುಖ್ಯವಾದ ಹಿಂಸೆಯ ಸಮಯಗಳಲ್ಲಿ ತನ್ನ ಸಭೆಯನ್ನು ಕಾಪಾಡಿದ್ದಾನೆ ಮತ್ತು ಆತನು ತನ್ನ ಸಭೆಯನ್ನು ಕೊನೆಯ ಕಾಲದಲ್ಲಿಯೂ ಕೂಡ ಕಾಪಾಡುತ್ತಾನೆ.

**ಕೊನೆಯ ದಿನಗಳ ಹಿಂಸೆಯ ಹಿನ್ನಲೆಯಲ್ಲಿ ಕ್ರಿಸ್ತನು ತನ್ನ ಜನರಿಗೆ ಹೀಗೆ ಹೇಳಿದನು:ನಿಮ್ಮ ಜೊತೆಯಲ್ಲಿ ಯಾವಾಗಲೂ ಇರುತ್ತೇನೆ, ಯುಗದ ಸಮಾಪ್ತಿಯವರೆಗೂ (ಮತ್ತಾಯ 28:20), ಈ ಅದ್ಭುತವಾದ ವಾಗ್ದಾನವನ್ನು ನಾವು ಹೇಗೆ ಅರ್ಥಮಾಡಿಕೊಳ್ಳುವುದು, ಆತನ ಹಿಂಬಾಲಕರಲ್ಲಿ ಅನೇಕರು ಹತಸಾಕ್ಷಿಗಳಾಗಿ ಸಾಯುತ್ತಿರುವಾಗ ಇದನ್ನು ನಾವು ಹೇಗೆ ಗ್ರಹಿಸುವುದು?** (ರೋಮ 8:31–39 ಮತ್ತು ಮತ್ತಾಯ 10:28).

---

---

ಯಾವ ಕೂಡ ಹಿಂಸೆಯಾಗಲಿ, ಬರಗಾಲ ಅಥವಾ ಮರಣವಾಗಲಿ ದೇವರ ಪ್ರೀತಿಯಿಂದ ನಮ್ಮನ್ನು ಆಗಲಿಸಲು ಸಾಧ್ಯವಿಲ್ಲ. ಕ್ರಿಸ್ತನ ಪ್ರಸನ್ನತೆ ನಮ್ಮ ಜೊತೆಯಿದೆ, ಅದು ಈಗ ಅಥವಾ ಕೊನೆಯ ಕಾಲದಲ್ಲಿ ಆಗಬಹುದು, ನಾವು ನೋವು, ಕಷ್ಟ ಮತ್ತು ಶೋಧನೆ ಅಥವಾ ಮರಣದಿಂದ ದೂರವಿರುತ್ತೇವೆ ಎಂದು ಹೇಳುವುದಿಲ್ಲ. ಈ ಜೀವನದಲ್ಲಿ ನಾವು ಈ ರೀತಿಯ ವಿನಾಯತಿಯ ವಾಗ್ದಾನವನ್ನು ಎಂದಿಗೂ ಪಡೆದುಕೊಂಡಿಲ್ಲ. ಇದರ ಅರ್ಥವೆಂದರೆ ಯೇಸುವು ನಮಗಾಗಿ ಏನು ಮಾಡಿದ್ದಾನೆ ಅದರ ಮೂಲಕ ನಾವು ದೇವರು ಈ ಸಮಸ್ಯೆಗಳ ಮತ್ತು ಕಷ್ಟದ ಸಮಯದಲ್ಲಿ ನಮ್ಮ ಜೊತೆಯಲ್ಲಿ ಇರುತ್ತಾನೆ ಮತ್ತು ನಮ್ಮನ್ನು ಕೈ ಹಿಡಿದು ಹೊಸ ಆಕಾಶ ಮತ್ತು ಹೊಸ ಭೂಮಿಗೆ ನಮ್ಮನ್ನು ನಡೆಸುತ್ತಾನೆ. ಈ ಲೋಕದಲ್ಲಿ ನಾವು ಎದುರಿಸುವ ಯಾವ ಕಷ್ಟವನ್ನಾದರೂ ಕೂಡ ಈ ನಿರೀಕ್ಷೆಯಿಂದ ಎದುರಿಸಬಹುದು, ಪೌಲನ ಹಾಗೆ ನಾವು ಕೂಡ ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ; ಅದನ್ನು ನೀತಿಯುಳ್ಳ

ನ್ಯಾಯಧಿಪತಿಯಾಗಿರುವ ಕರ್ತನು ಆ ದಿನದಲ್ಲಿ ನನಗೆ ಕೊಡುವನು; ನನಗೆ ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರಿತಿಸುವವರೆಲ್ಲರಿಗೂ ಕೊಡುವನು. (2 ತಿಮೋಥಿ 4:8) ಎಂದು ಹೇಳಬಹುದು. ಆತನ ಪ್ರತ್ಯಕ್ಷತೆಯನ್ನು ಪ್ರೀತಿಸುವ ನಾವು ಈ ನಿರೀಕ್ಷೆಯನ್ನು ಮತ್ತು ವಾಗ್ದಾನವನ್ನು ನಮಗಾಗಿ ಪಡೆಯಬಹುದು.

**ಗುರುವಾರ**

## ಆಜ್ಞೆ ಮತ್ತು ಸುವಾರ್ತೆ

ಸೇವೆಂತ್ ಡೇ ಅಡ್ವೆಂಟಿಸ್ಟ್ ರಾಗಿ ನಾವು ಯಾವುದಕ್ಕಾಗಿ ನಿಂತಿದ್ದೆವೋ ಅದನ್ನು ನಮ್ಮ ಹೆಸರನಲ್ಲಿ ಹೊಂದಿದ್ದೇವೆ. ಸೇವೆಂತ್ ಡೇ ಏಳನೇಯ ದಿನ ಸಬ್ಬತ್ತನ್ನು ಸೂಚಿಸುತ್ತದೆ ಇದು ನಮ್ಮ ಸಿದ್ದಾಂತವನ್ನು ತೋರಿಸುತ್ತದೆ, ಇದೊಂದು ಆಜ್ಞೆಯಲ್ಲ ಬದಲಾಗಿ ನಮ್ಮ ನಂಬಿಕೆಯ ಮೂಲಕ ಎಲ್ಲಾ ಆಜ್ಞೆಗಳನ್ನು ಕೈಕೊಂಡು ನಡೆಯುತ್ತೇವೆ. ಅಡ್ವೆಂಟಿಸ್ಟ್ ಭಾಗವು ಕ್ರಿಸ್ತನ ಎರಡನೇಯ ಬರೋಣದ ಕುರಿತಾಗಿ ಹೇಳುತ್ತದೆ, ಕ್ರಿಸ್ತನು ತನ್ನ ಮೊದಲನೇಯ ಬರೋಣದಲ್ಲಿ ನಮಗಾಗಿ ಏನು ಮಾಡಿದನೋ ಅದರ ಫಲವಾಗಿ ನಾವು ಈ ನಿರೀಕ್ಷೆಯನ್ನು ಹೊಂದಿದ್ದೇವೆ. ಆದ್ದರಿಂದ ನಮ್ಮ ಹೆಸರು ಸೇವೆಂತ್ ಡೇ ಅಡ್ವೆಂಟಿಸ್ಟ್ ನಮ್ಮ ಪ್ರಸ್ತುತ ಸತ್ಯದ ಎರಡು ಮುಖ್ಯವಾದ ಭಾಗಗಳನ್ನು ಸೂಚಿಸುತ್ತದೆ. ಆಜ್ಞೆ ಮತ್ತು ಸುವಾರ್ತೆ.

ಈ ವಚನಗಳು ಆಜ್ಞೆ ಮತ್ತು ಸುವಾರ್ತೆ ಹೇಗೆ ಒಂದಕ್ಕೊಂದು ಬೆಸೆದುಕೊಂಡಿವೆ ಎಂಬುದನ್ನು ತೋರಿಸುತ್ತವೆ?

**ಯೇರೆಮಿಯ 44:23** ________________________________

**ರೋಮ 3:20–26** ________________________________

**ರೋಮ 7:7** ________________________________

ಸುವಾರ್ತೆ ಒಂದು ಶುಭ ಸಮಾಚಾರ, ಶುಭವಾರ್ತೆಯೆಂದರೆ ನಾವೆಲ್ಲರೂ ದೇವರ ಆಜ್ಞೆಯನ್ನು ಮಿರಿದ್ದೇವೆ, ಕ್ರಿಸ್ತನು ಶಿಲುಬೆಯ ಮಾಡಿದ ತ್ಯಾಗದ

ಮೂಲಕ ನಂಬಿಕೆಯಿಂದ ಆತನು ಆಜ್ಞೆಯ ಅತಿಕ್ರಮಣದ ಶಿಕ್ಷೆಯಿಂದ ನಮ್ಮನ್ನು ರಕ್ಷಿಸಿದ್ದಾನೆ. ಮತ್ತು ನಾವು ಆಜ್ಞೆಗೆ ಸಂಪೂರ್ಣವಾದ ವಿಧೇಯತೆಯನ್ನು ತೋರಿಸುವ ಶಕ್ತಿಯನ್ನು ನೀಡಿದ್ದಾನೆ.

ಕೊನೆಯ ಕಾಲದ ಹಿನ್ನಲೆಯಲ್ಲಿ ಮಹಾಹೋರಾಟವು ಉಗ್ರ ರೂಪವನ್ನು ಪಡೆಯುವ ಹಾಗೆ ದೇವರ ಮಕ್ಕಳು ವಿಶೇಷವಾದ ರೀತಿಯಲ್ಲಿ ಚಿತ್ರಿತವಾಗುತ್ತಾರೆ.

**ಪ್ರಕಟನೆ 14:12 ನ್ನು ಓದಿರಿ. ಈ ವಚನವು ಆಜ್ಞೆ ಮತ್ತು ಸುವಾರ್ತೆಯ ನಡುವಿನ ಸಂಬಂಧವನ್ನು ಹೇಗೆ ತೋರಿಸುತ್ತದೆ?**

---

---

**ಸೇವೆಂತ್ ಡೇ ಅಡ್ವೆಂಟಿಸ್ಟ್, ರು ದೇವರ ಆಜ್ಞೆಗೆ ತೋರಿಸುವ ವಿಧೆಯತೆಯನ್ನು ನಂಬುತ್ತಾರೆ, ದೇವರ ಪ್ರೀತಿಯಿಂದ ರಕ್ಷಿಸಲ್ಪಟ್ಟ ಕೃತಜ್ಞತೆಯಿಂದ ಆಜ್ಞೆಗೆ ವಿಧೇಯತೆಯನ್ನು ತೋರಿಸುತ್ತೇವೆ ಹೊರೆತು ಅದನ್ನು ಕ್ರಮಪ್ರಾಧಾನ್ಯತೆ ಎಂದು ನಾವು ಭಾವಿಸುವುದಿಲ್ಲ ಎಂದು ಇತರರಿಗೆ ನೀವು ಹೇಗೆ ಹೇಳುವಿರಿ? ಧರ್ಮೋಪದೇಶಕಾಂಡ 11:1 ಮತ್ತು 1 ಯೋಹಾನ 5:3 ವಚನಗಳು ಈ ವಾದವನ್ನು ಹೇಗೆ ಪುಷ್ಟಿಕರಿಸುತ್ತವೆ.?**

**ಶುಕ್ರವಾರ**

**ಮುಂದಿನ ಆಲೋಚನೆ:** ಪ್ರಕಟನೆ 12:9–12 ಮತ್ತು ಎಲೆನ್ ಜಿ ವೈಟ್ ರವರ ಪಿತೃಗಳು ಮತ್ತು ಪ್ರವಾದಿಗಳು ಪುಸ್ತಕದ "ಪಾಪವನ್ನು ಯಾಕೆ ಅನುಮತಿಸಲಾಯಿತು" ಅಧ್ಯಾಯವನ್ನು ಓದಿರಿ.

ಸೃಷ್ಟಿಸಲ್ಪಟ್ಟ ಎಲ್ಲಾ ಜೀವಿಗಳೂ ದೇವರ ಪ್ರೀತಿಗೆ ತಮ್ಮ ಅನುಮೋದನೆಯನ್ನು ತಿಳಿಸುವ ತನಕ ವಿಶ್ವದಲ್ಲಿ ಪರಿಪೂರ್ಣವಾದ ಸಮಾಧಾನವು ನೆಲೆತ್ತು. ತಮ್ಮ ಸೃಷ್ಟಿಕರ್ತನ ಉದ್ದೇಶವನ್ನು ನೆರವೇರಿಸುವುದು ಅವರಿಗೆ ಸಂತೋಷದ

ಕೆಲಸವಾಗಿತ್ತು. ಆತನ ಮಹಿಮೆಯನ್ನು ತೋರಿಸುವುದು ಮತ್ತು ಆತನನ್ನು ಸ್ತುತಿಸುವುದು ಅವರಿಗೆ ಆನಂದವನ್ನು ನೀಡುತ್ತಿತ್ತು. ದೇವರ ಪ್ರೀತಿಯು ಅವರ ಪರಮೋಚ್ಛ ಕರ್ತವ್ಯವಾಗಿದ್ದಾಗ ಒಬ್ಬರನ್ನೊಬ್ಬರು ಪ್ರೀತಿಸುವುದು ನಿಸ್ವಾರ್ಥದಿಂದ ಇರುವುದು ಅವರಿಗೆ ಸಾಮಾನ್ಯವಾಗಿತ್ತು. ಎಲ್ಲಾ ಕಡೆಯಲ್ಲೂ ಸಮಾಧಾನವು ನೆಲೆತ್ತು.. ಆದರೆ ಈ ಸಂತೋಷದ ವಾತಾವರಣದಲ್ಲಿ ಬದಲಾವಣೆಯು ಬಂದಿತು. ದೇವರು ಕೊಟ್ಟ ಸ್ವಾತಂತ್ರ್ಯವನ್ನು ಒಬ್ಬನು ದುರುಪಯೋಗಪಡಿಸಿಕೊಂಡನು. ಪಾಪವು ಅವನಲ್ಲಿ ಹುಟ್ಟಿತು, ಕ್ರಿಸ್ತನ ನಂತರದ ಸ್ಥಾನದಲ್ಲಿರುವವನು ಮತ್ತು ದೇವರಿಂದ ಹೆಚ್ಚಿನ ಗೌರವವನ್ನು ಪಡೆದಿದ್ದವನ ಮನಸ್ಸಿನಲ್ಲಿ ಇದು ಉಂಟಾಯಿತು. **ಎಲೆನ್ ಜಿ ವೈಟ್, ಪೆಟ್ರಿಯಾರ್ಕ್ಸ್ ಅಂಡ್ ಪ್ರಾಫೆಟ್ಸ್ ,ಪುಟ 35**.

ಎಲೆನ್ ಜಿ ವೈಟ್‌ಮ್ಮನವರ ಮಾತುಗಳನ್ನು ಗಮನಿಸಿರಿ, ಪ್ರೀತಿಗೆ ನಿಷ್ಠೆ ಈ ಶಕ್ತಿಶಾಲಿಯಾದ ವಾಕ್ಯವು ಅರ್ಥಪೂರ್ಣವಾಗಿದೆ, ಇದರ ಅರ್ಥವೆಂದರೆ ಪ್ರೀತಿಯು ನಿಷ್ಠೆಗೆ, ನಂಬಿಕೆಗೆ ನಡೆಸುತ್ತದೆ. ದಂಪತಿಯು ತನ್ನ ಪ್ರೀತಿಯನ್ನು ಅವಳ ಅಥವಾ ಅವನ ನಿಷ್ಠೆಯಿಂದ ತೋರಿಸುತ್ತಾರೆ. ಇದೇ ರೀತಿಯಲ್ಲಿ ಪರಲೋಕದ ಜೀವಿಗಳು ಇದ್ದರು, ಇದೇ ರೀತಿಯಲ್ಲಿ ಈಗ ದೇವರ ಜೊತೆಗೆ ನಮ್ಮ ಸಂಬಂಧವಿರಬೇಕು.

## ಚರ್ಚಿಸಬೇಕಾದ ಪ್ರಶ್ನೆಗಳು

1. ಮಹಾ ಹೋರಾಟದಲ್ಲಿ ಸೈತಾನನ ಪಾತ್ರ ಮಾತ್ರವಲ್ಲದೆ ಅವನ ವಾಸ್ತವಿಕತೆಯನ್ನು ಧೃಢಪಡಿಸುವ ಯಾವ ಸತ್ಯವೇದದ ವಚನಗಳು ಇವೆ? ಸೈತಾನನನ್ನು ಮಾನವ ಹೃದಯದ ದುಷ್ಟತನಕ್ಕೆ ಮಾತ್ರ ಬಾಧ್ಯನನ್ನಾಗಿ ಮಾತ್ರ ಮಾಡದೆ  ಅವನ ವಾಸ್ತವಿಕತೆಯನ್ನು ವ್ಯಯಕ್ತಿಕವಾಗಿ ನೀವು ಹೇಗೆ ನಂಬುವಿರಿ?

2. ಸೇವೆಂತ್ ಡೇ ಅಡ್ವೆಂಟಿಸ್ಟ್‌ರಾಗಿ, ಸತ್ಯವೇದದ ಜ್ಞಾನದಲ್ಲಿ ದೇವರು ನಮಗೆ ಅಪಾರವಾದ ನಿಧಿಯನ್ನು ನೀಡಿದ್ದಾನೆ. ಅದು ಎಷ್ಟು ಅದ್ಭುತವೋ ಅದೇ ರೀತಿಯಲ್ಲಿ ಬರೀ ಜ್ಞಾನವು ಮಾತ್ರ ನಮ್ಮನ್ನು ರಕ್ಷಿಸಲು ಸಾಧ್ಯವಿಲ್ಲ

ಅದಕ್ಕಿಂತ ಮಿಗಿಲಾಗಿ ನಮಗೆ ಇನ್ನೂ ಏನೋ ಬೇಕಾಗಿದೆ ಎಂದು ನೀವು ಹೇಗೆ ನಂಬುವಿರಿ?

3. ಈಗಲೂ ಕೂಡ ನಿಮ್ಮ ಜೀವನದಲ್ಲಿ ನೀವು ಕ್ರಿಸ್ತನ ಪ್ರಸನ್ನತೆಯನ್ನು ಹೇಗೆ ಅನುಭವಿಸುತ್ತಿದ್ದಿರಿ? ನಿಮ್ಮ ಜೀವನದಲ್ಲಿ ಬರುವ ಯಾವ ರೀತಿಯ ಕಷ್ಟವನ್ನಾದರೂ ಎದುರಿಸಲು ಈ ಅನುಭವವು ಹೇಗೆ ನಿಮಗೆ ಸಹಾಯ ಮಾಡುತ್ತದೆ?

4. ಪ್ರೀತಿಗೆ ನಿಷ್ಠೆ ಎಂಬ ವಾಕ್ಯದ ಕುರಿತಾಗಿ ನಿಮ್ಮ ತರಗತಿಯಲ್ಲಿ ಚರ್ಚಿಸಿರಿ. ಈ ವಾಕ್ಯವು ಕೃಪೆ ಮತ್ತು ಆಜ್ಞೆ ಹಾಗೂ ನಂಬಿಕೆ ಮತ್ತು ವಿಧೇಯತೆ ನಡುವಿನ ಸಂಬಂಧವನ್ನು ಹೇಗೆ ದೃಢಪಡಿಸುತ್ತದೆ? ಪ್ರೀತಿಯಲ್ಲಿ ದೇವರು ನೀಡುವ ಸ್ವಾತಂತ್ರ್ಯದಕುರಿತಾಗಿ ಇದು ಏನು ಹೇಳುತ್ತದೆ?